ಮುಂದಿರುವ ಒಂದು ಬುಟ್ಟಿಯಲ್ಲಿ ಬಂದು ಹಾಕುತ್ತಿದ್ರು. ಇತ್ತ ಭೀಮಪ್ಪನ ಮನೆಯಿಂದ ಉರಿಮೆ, ತಮಟೆಯನ್ನು ಬಾರಿಸಿಕೊಂಡು, ಚರಗದ ಬುಟ್ಟಿಯನ್ನು ಹೊತ್ತು ಕೇರಿಯ ಜನರೊಂದಿಗೆ ದುರಗವ್ವಗೆ ಕೋಣ ಬಲಿಕೊಟ್ರು ಎಂಬಂತೆ, ಕೇಕೇ, ಸಿಳ್ಳು ಹಾಕುತ್ತ ಇವತ್ತೊಂದಿನ ನಮ್ಗೆ ಶೋಷಣೆಯಿಂದ ಬಿಡುಗಡೆ ಸಿಕ್ತು ಅಂಬ್ತಾ ಸಣ್ಣ ಮಕ್ಳಿಂದ, ಮುದೆರವರೆಗೂ ತಮಟೆಗೆ ಹೆಜ್ಜೆ ಹಾಕ್ತ ಗುಡಿ ಮುಂದೆ ಬಂದು ನಿಂತ್ರು... ಅಲ್ಲಿದ್ದ ಮುದುಕನೊಬ್ಬ ಚರಗದ ಬಗ್ಗೆ ಯಾರಿಗೋ ಹೇಳ್ತಾನೆ 'ಚರಗದ ಬುಟ್ಟಿ ಹೊರುವುದು ಎಂದರೆ ಅಷ್ಟು ಸುಲಭವಾದ ಮಾತು ಅಲ್ಲಾ ಕಣ್ಲೇ, ಅದರಾಗೇ ದುರ್ಗವ್ವನ ಜೀವಕಾಳ ಇರತ್ತದೆ, ಸ್ವಲ್ಪ ಏಕಿಬೀಕಿ ಅದ್ರೂ ಭೀಮಪ್ಪನ ಹೆನ್ತಿ ಮಾರವ್ವ ಬಿಳಿ ಸೀರೆ ಉಟ್ಟು, ಮೂಗುತಿ ತಾಳಿ ತೆಗೆದು, ಗಂಡ ಸತ್ತ ಮುಂಡೆರು ಇದ್ದಂಗೆ. ಆ ಊರಿನ ಬುಡ್ಡೆ ಕಲ್ಲಿನ ಹತ್ತಿರ ವಿಧವೆಯಾಗಿ, ಒಂಟಿಕಾಲಿನಲ್ಲಿ ನಿಂತುಕೊತ್ತಾಳೆ, ಅಗ ಚರಗದ ಬುಟ್ಟಿ ಹೊತ್ತಕೊಂಡ ಭೀಮಪ್ಪ ಬೆತ್ತಲಾಗಿ, ಇಡೀ ಊರಿನ ಸುತ್ತಲು ತಿರುಗಿ ಚರಗ ಚೆಲ್ಲಿ ಬರಬೇಕು. ಅವನಿಂದೆ ಇರುವ ನಾಲ್ಕು ಜನ, ನಮ್ಮಟ್ಟಿ ಹಿರೀಕ್ರು, ಗೌಡ್ರು, ಗೊಂಚಿಕಾರರನ್ನು ಬೈದುಕೊಂಡು, ಅದರಲ್ಲಿರುವ ಹಸಿ ಹಿಟ್ಟನ್ನು ಊರಿಗೆ ಮುಸುರೆ ಚೆಲ್ಲುತ್ತ ಬರ್‍ತಾರೆ. ಇತ್ತ ಬೇವಿನ ಸೊಪ್ಪು ಹೊದಿಸಿಕೊಂಡು ದುರ್ಗವ್ವನ ಧ್ಯಾನದಲ್ಲಿ, ಒಂಟಿಕಾಲಿನಲ್ಲಿ ನಿಂತ ಹೆಣ್ಣುಮಗಳು, 'ನನ್ನ ಮುತ್ತೈದೆತ್ನ... ನೀನೇ ಕಾಪಾಡ್ವೇ ನನ್ನವ್ವ' ಎಂಬ್ತಾ ಎದೆಯುಸಿರು ಬಿಗಿಹಿಡಿದು, ಚರಗ ತಿರುಗಲು ಹೋದವ ಜೀವಂತವಾಗಿ ಬರ್‍ತಾನೋ ಇಲ್ವೋ ಎಂದು ಗಂಡನ ದಾರಿಯನ್ನು ಕಾಯ್ತುವಳೆ. ಬದುಕಿ ಬಂದ್ರೇ ಮತ್ತೇ ಮುತ್ತೈದೆ ಭಾಗ್ಯ. ಇಲ್ಲಾಂದ್ರೇ ಜೀವನ ಪೂರ್ತಿ ವಿಧಮುಂಡೆ ಅಗಿನೇ ಕಪ್ಪಾಗಿ ಬದುಕಬೇಕು' ಹೀಗೆ ಹೇಳಿ ಮುಗಿಸುವ ಹೊತ್ತಿಗೆ ಚರಗ ತಿರುಗಿ ಬರಲು ಹೋದವರು ಬಂದೇಬಿಟ್ಟರು, ಮುದ್ಕ ಹೇಳಿದಂತೇನೂ ಅಗಿರಲಿಲ್ಲ. ಅದರೆ ಭೀಮಪ್ಪ ಮೊದಮೊದಲು ಮೂರ್ಛೆ ಹೋಗಿದ್ದನೆಂದು ಅಲ್ಲಿದ್ದ ನಾಲ್ಕಾರು ಹಿರಿಯರು ನೀರು ಮುಖಕ್ಕೆ ಹಾಕುತ್ತಿದ್ರು. ಒಂಟಿ ಕಾಲಿನಲ್ಲಿ ನಿಂತಿದ್ದ ಭೀಮಪ್ಪನ ಹೆನ್ತಿ ಕಣ್ಣು ಮುಚ್ಚಿಕೊಂಡು ಇನ್ನು ಜೋರಾಗಿ 'ದುರ್ಗವ್ವ ನನ್ನ ತಾಯಿ, ನಿನ್ನ ಮಗಳ ಮುತ್ತೈದೆತನಾ ತೆಗಿಬೇಡ್ವೇ' ಎಂದು ಕೈಮುಗಿದು ಕಣ್ಣರಳಿಸಿದ್ಲು, ದೂರದಲ್ಲಿದ್ದ ಗಂಡನ ಕಡೆ ನೋಡಿದ್ಲು. ಅಷ್ಟೊತ್ತಿಗೆ ಯಾರೋ ನಾಲ್ಕೈದು ಮಂದಿ ದೂರದಲ್ಲಿ ನಿಂತು 'ಅದ್ಯಾವ ತಪ್ಪು ಮಾಡಿದ್ದನೋ, ಈ ಹೊಲೇರ ಭೀಮ ಪಾಪ. ದುರ್ಗವ್ವನ ಕೋಣ ಬೀಳೋದಕ್ಕಿಂತ ಮುಂಚೆ, ಇವನೇ ಜೋಡಿ ದುಗ್ಗವ್ವಗೆ ಬಲಿಯಾಗಬಿಟ್ಟನಲ್ಲೋ' ಎಂದು ಮಾತಾಡಿ ಚೀರಾಡುತ್ತಿದ್ರು. ಇವರ ಮಾತನ್ನು ಅಲಿಸಿದ ಮಾರವ್ವ ಮೇಲೆ, ಕೇಳಗಾಗಿ 'ಊರಿನಲ್ಲಿ ನಿನ್ನ ಹೆಸರ್ನಲ್ಲಿ ರೊಕ್ಕ ಹೊಡದು, ಮನೆಮಾರು ಕಟ್ಟಿಕೊಂಡ ಗೌಡ್ರನ್ನ ಗೊಂಚಿಕಾರ್‍ನ ಕಾಪಾಡುತ್ತೀಯಾ, ನಿನ್ನ ಸೇವೆ ಮಾಡಿದ ನನ್ನ ಗಂಡ್ನ ಕಾಪಾಡಲಿಲ್ಲಾ ಅಲ್ವೇ ನನ್ನ ದುರ್ಗವ್ವ' ಎಂದು, ಎದೆಎದೆ ಬಡಿದುಕೊಳ್ಳುತ್ತಿದ್ದಂತೆ ಮೂರ್ಛೆ ಹೋದಳು. ಮತ್ತೇ ಅವಳು ಕಣ್ಣು ಬಿಟ್ಟು ನೋಡುವ ಹೊತ್ತಿಗೆ ಗಂಡನ ಎದೆಯ ಮೇಲೆ ಅವಳ ಎರಡು ಕೈ ಬಳೆಗಳನ್ನು ಒಡೆಯುತ್ತಿದ್ದರು.

ಹೊಲೇರ ಕೇರಿ ಜನ್ರು, ತಲೆಗೊಂದು ಕಥೆಕಟ್ಟಿ 'ಭೀಮಪ್ಪನಿಗೆ ಊರಿನ ಗೌಡ್ರು ದೇವರು ಅಗೋವರೆಗೂ ಮದುವೆ ಮುಂಜಿ ಮಾಡಬೇಡ್ಲೇ ಎಂದು ಹೇಳಿದ್ದರಂತೆ. ಅದ್ರೇ ಈವಯ್ಯ ಅವರು ಮಾತುಮೀರಿ ಮಗನ ಮದುವೆ ಮಾಡಿದ್ದಕ್ಕೆ ದುರ್ಗವ್ವ ಮುನಿಸಿಕೊಂಡು, ನನ್ನ ವ್ರತ ಭಂಗ ಮಾಡ್ಯಾನೆ, ಅವನ ಸಂಸಾರನ್ನೆ ಭಂಗ ಮಾಡ್ಯಾಳಂತೆ' ಎಂದು ಮಾತಾಡಿದ್ರೆ, ಇನ್ನೂ ಕೆಲವರು 'ತನ್ನ ಸೊಸೆಯಾದ ಸಂಕವ್ವನ ಕಾಲ್ಗುಣ ಸರಿಯಿಲ್ಲಾ, ಮದುವೆಯಾಗಿ ಹದಿನೈದು ದಿನದಲ್ಲೇ ಹೀಗೆ ಅಗುತ್ತೇ ಅಂತ ಜ್ಯೋತಿಷರು ಭೀಮಪ್ಪನಿಗೆ ಮೊದ್ಲೇ ಹೇಳಿದ್ದರಂತೆ' ಎಂದು, ಸಂಕವ್ವನ ಮದುವೆಯಿಂದ್ಲೇ, ಭೀಮಪ್ಪ ಚರಗ ಹೊತ್ತು ರಕ್ತಕಾರಿ ಸತ್ತಿದ್ದು ಎಂದು